ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 434/2016 ಸಿ.ಡಬ್ಲ್ಯೂ –5 ಪಿ.ಡಬ್ಲ್ಯೂ -5

| | | |
|---|---|---|
| ಹೆಸರು | ಃ | ಸುನೀಲ |
| ತಂದೆ | ಃ | ಪ್ರಶಾಂತಪ್ಪ |
| ವಯಸ್ಸು | ಃ | ೩೪ ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸಸ್ಥಳ | ಃ | ದೇವಂತಗಿ |

ದಿನಾಂಕಃ ೦೨.೦೪.೨೦೨೪
ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-೧ ನನ್ನ ತಂದೆ, ಚಾಸಾ-4 ನನ್ನ ತಾಯಿ, ಚಾಸಾ-2, 3, 6 ರಿಂದ 10 ರವರ ಪರಿಚಯ ಇರುತ್ತದೆ. ನಾವು ಆರೋಪಿತರ ಬಳಿಯಿಂದ ಹಣವನ್ನು ಬಡ್ಡಿಗಾಗಿ ಪಡೆದುಕೊಂಡಿದ್ದೆವು, ಅದರ ಜಾಮೀನಿಗಾಗಿ ಮುದ್ದತ್ತ ರಜಿಸ್ಟರ್ ಮಾಡಿಕೊಟ್ಟಿರುತ್ತೇನೆ. ನಾನು ಜಮೀನಿನಲ್ಲಿದ್ದಾಗ ಆರೋಪಿತರು ನಮ್ಮ ಜಮೀನಿಗೆ ಟ್ರಾಕ್ಟರ್ ತೆಗೆದುಕೊಂಡು ಬಂದು ಹೊಡಪೆಟ್ಟು ಮಾಡಿರುತ್ತಾರೆ. ನಾನು ಇವತ್ತಿನವರೆಗಾದರೂ ಹಣ ಮರಳಿ ಆರೋಪಿತರಿಗೆ ನೀಡಲು ತಯಾರಿದ್ದೇನೆ, ಆದರೆ ಆರೋಪಿತರು ತೆಗೆದುಕೊಳ್ಳಲು ತಯಾರಿಲ್ಲ.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)**

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ಜಮೀನು ಸ.ನಂ. 63, ಕ್ಷೇತ್ರ 5 ಎ-37 ಗುಂಟೆ ಜಮೀನನ್ನು ಆರೋಪಿತರಿಂದ 5,75,000-00 ಗಳನ್ನು ಪಡೆದುಕೊಂಡು ಮೂರು ವರ್ಷಗಳಿಗಾಗಿ ಮುದ್ದತ್ತ ರಜಿಸ್ಟರ್ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿ. ಆರೋಪಿ ನಂ.೧ ರವರಿಗೆ ಸದರಿ ಹಣ ಮರಳಿ ಕೊಡಲು ಹೋದಾಗ ಅವಳು ತೆಗೆದುಕೊಳ್ಳದೇ ನಾನು ಹಣ ನಿಮಗೆ ಮರಳಿ ತೆಗೆದುಕೊಳ್ಳುವುದಕ್ಕೆ ಕೊಟ್ಟಿರುವುದಿಲ್ಲ, ಜಮೀನು ಖರೀದಿ ಮಾಡಿರುವುದಕ್ಕೆ ಕೊಟ್ಟಿರುತ್ತೇನೆ ಎಂದು ಹೇಳಿರುತ್ತಾಳೆ ಎಂದರೆ ಸರಿ. ಜಮೀನು ಈಗ ಆರೋಪಿತರ ಕಬ್ಜಾ ವಹಿವಾಟಿಯಲ್ಲಿರುತ್ತದೆ ಎಂದರೆ ಸರಿ. ದಿ.17.10.2015 ರಂದು 11.30 ಸುಮಾರಿಗೆ ಆರೋಪಿತರು ಜಮೀನನ್ನು ಸಾಗುವಳಿ ಮಾಡುತ್ತಿರುವಾಗ ನಮ್ಮ ತಂದೆಯವರು ಹಿರಿಯರ ಸಮಕ್ಷಮ ಕರೆದುಕೊಂಡು ಹೋಗಿ ಆರೋಪಿ ನಂ.೧ ರವರನ್ನು ನೀವು ಕೊಟ್ಟಿರುವ ಹಣವನ್ನು ಬಡ್ಡಿ ಸಮೇತ ಕೊಡುತ್ತೇವೆ, ನಮ್ಮ ಜಮೀನು ನಮಗೆ ಮರಳಿ ಕೊಡು ಎಂದು ಹೇಳಿರುತ್ತೇವೆ ಎಂದರೆ ಸರಿ. ಆಗ ಆರೋಪಿ ನಂ.೨ ಏ ರಂಡಿ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಹೊಲದ ವ್ಯವಹಾರ ಎಲ್ಲಾ ಮುಗಿದಿದೆ ಎಂದು ಹೇಳಿ ಚಾಸಾ-೧ ರವರ ಬೆನ್ನು ಬಾಗಿಸಿ ಕೈಯಿಂದ ಹೊಡೆದನು ಎಂದರೆ ಸರಿ. ಚಾಸಾ-೪ ರವರು ಬಿಡಿಸಲು ಬಂದಾಗ ಅವರ ಸೀರೆ ಸೆರಗು ಹಿಡಿದು ಎಳೆದಾಡಿ ಕೈಯಿಂದ ಬೆನ್ನ ಮೇಲೆ ಹೊಡೆದನು

ಎಂದರೆ ಸರಿ. ಆರೊಪಿ ನಂ.೧ ಈ ಹಾಟ್ಯಾಗಳನ್ನು ಬಿಡಬೇಡಿರಿ ಎಂದು ಹೇಳಿ ಆರೋಪಿ ನಂ.೩ ರವರ ಬಳಿಯಿದ್ದ ಕುರುಪಿಯನ್ನು ತೆಗೆದುಕೊಂಡು ಚಾಸಾ-೧ ರವರ ಕಡೆಗೆ ಬೀಸಿದರು ಎಂದರೆ ಸರಿ. ಆಗ ಸದರಿ ಕುರುಪಿಯು ಚಾಸಾ-೬ರವರ ಕಾಲಿಗೆ ತಗುಲಿ ಬಿದ್ದಿರುತ್ತದೆ ಎಂದರೆ ಸರಿ. ಚಾಸಾ-೮ ರವರನ್ನು ಬಿಡಿಸಲು ಹೋದಾಗ ಆರೋಪಿ ನಂ. 4, 5 ರವರು ತಡೆದು ನಿಲ್ಲಿಸಿದರು ಎಂದರೆ ಸರಿ. ಆರೋಪಿ ನಂ.7 ಚಾಸಾ-೭ ರವರಿಗೆ ರಟ್ಟೆಗೆ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿ ನಂ.೮ ಮತ್ತು ೯ ರವರು ನಾನು ಬಿಡಿಸಲು ಹೋದಾಗಿ ನನಗೆ ತಡೆದು ಬೆನ್ನ ಮೇಲೆ ಮತ್ತು ಕಪಾಳಕ್ಕೆ ಹೊಡೆದರು ಎಂದರೆ ಸರಿ. ಸದರಿ ಜಗಳವನ್ನು ಚಾಸಾ-8 ರಿಂದ 10 ರವರು ಬಿಡಿಸಿರುತ್ತಾರೆ ಎಂಧರೆ ಸರಿ. ನಂತರ ಆರೊಪಿತರೆಲ್ಲರೂ ಇನ್ನು ಮುಂದೆ ನೋಡಿಕೊಳ್ಳುತ್ತೇವೆ ಎಂದು ಚೀರಾಡುತ್ತಾ ಓಡಿ ಹೋದರು ಎಂದರೆ ಸರಿ. ಈ ರೀತಿಯಾಗಿ ಪೋಲಿಸರ ಮುಂದೆ ನಾನು ಹೇಳಿಕೆ ನೀಡಿರುತ್ತೇನೆ ಎಂಧರೆ ಸರಿ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಬಿ.ಎ.ಡಿ. ವಕೀಲರಿಂದ**

[ ಈ ಹಂತದಲ್ಲಿ ಆರೋಪಿತರ ಪರ ವಕೀಲರು ಸಾಕ್ಷಿ ಮತ್ತು ಆರೋಪಿತರ ನಡುವೆ ಸಿವಿಲ್ ದಾವೆ ಇರುವುದರಿಂದ ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು]

.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ